Lands Distributed to the Landless people of North Kanara District

895. Smt. RADHA KOM BHAT (Ankola).—

Will the Minister for Revenue be pleased to state :—

(*a*) the number of persons to whom the land was granted by the Land Grant Committee in Karwar District during the last one year and the extent of acres (Talukwise details may be furnished) ;

(*b*) the names of taluks wherein Government lands are available for distribution to the landless people in North Kanara District and its extent (Talukwise information may be furnished) ?

Sri N. HUTCHAMASTHY GOWDA (Minister for Revenue).—

(*a*) The lands were distributed since the appointment of Land Gant Committee, *i.e.*, from 1st September 1972 to 31st March 1973 as follows :—

Taluk	Extent of land distributed			The No. of persons to whom the land was distributed.
	Acres	*Guntas*	*Ane*	
Karwar ...	...	...	...	...
Ankola ...	...	...	...	...
Kumta ...	53	34	...	13
Honnavar ...	7	...	...	2
Bhatkal ...	...	...	...	...
Sirsi ...	64	25	11	21
Siddapur ...	...	...	...	...
Yellapur ...	3	38	...	1
Haliyal ...	2	31	...	1
Mundgod ...	40	30	...	14
Supa ...	90	11	...	22
	263	9	11	74

(SRI N. HUTCHAMASTI GOWDA)

(b)—

Taluk		Extent of land		
		Acres	*Guntas*	*Ane*
Karwar	...	284	09	00
Ankola	...	576	05	00
Kumta	...	167	37	12
Honnavar	...	23	12	00
Bhatkal	...	43	28	00
Sirsi	...	750	02	09
Siddapur	...	75	23	14
Yellapur	...	144	28	08
Haliyal	...	35	08	00
Mundgod	...	970	16	08
Supa	...	770	15	08
	Total	3,841	27	03

ಶ್ರೀಮತಿ ರಾಧಾ ಕಾಂ ಭಟ್.—(ಅ) ಪ್ರಶ್ನೆಗೆ ಉತ್ತರವಾಗಿ ಹೇಳಿರುವ ಪ್ರಕಾರ, ಕಾರವಾರ ಅಂಕೋಲಾ, ಭಟ್ಕಳ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಯಾರಿಗೂ ಒಂದು ಎಕರೆ ಭೂಮಿಯನ್ನೂ ವಿತರಣೆ ಮಾಡಲಿಲ್ಲವೆಂದು ಹೇಳಿದೆ. ಅಂದಮೇಲೆ ಈ ತಾಲ್ಲೂಕಿನಲ್ಲಿ ಜನರ ಬೇಡಿಕೆ ಇರಲಿಲ್ಲವೇ? ಅಥವಾ ರ್ಯಾಂಡ್ ಗ್ರಾಂಟ್ ಕಮಿಟಿಯವರು ಸಮರ್ಪಕವಾಗಿ ಅವರ ಕಾರ್ಯವನ್ನು ನಿರ್ವಹಿಸಲಿಲ್ಲವೇ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಮೀನು ಆ ತಾಲ್ಲೂಕುಗಳಲ್ಲಿ ಸ್ವಲ್ಪ ಸ್ವಲ್ಪ ಇದೆ. ಅಲ್ಲಿ ಏನು ತೊಂದರೆ ಇದೆಯೆಂದರೆ, ಅಲ್ಲಿ ಮೊದಲಿನಿಂದಲೂ ರೈತರ್ಸ್ ಲೈನ್ ಹಾಕಬೇಕೆಂಬ ಆರೋಪಣೆ ಇತ್ತು. ಅದಕ್ಕಾಗಿ 723 ಎಕರೆ ಭೂಮಿಯನ್ನು ರಿಜರ್ವ್ ಮಾಡಿದೆ. ಮತ್ತೆ 113 ಎಕರೆಯನ್ನು ಟೌನ್ ಎಕ್ಸ್‌ಟೆನ್‌ಷನ್ ಗೋಸ್ಕರ ಸುಫಾ ಮತ್ತು ಹಳಿಯಾಳಗಳಲ್ಲಿ ರಿಜರ್ವ್‌ಮಾಡಿದೆ. ಇಷ್ಟು ಭೂಮಿಯನ್ನು ಬಿಟ್ಟು ಉಳಿದ ಜಮೀನನ್ನು ಕೊಡುವುದಕ್ಕೆ ಏರ್ಪಾಡು ಮಾಡಿದೆ. ಅದಕ್ಕಾಗಿ ಸಮಿತಿಯವರು ಕೂಡ ಕೆಲಸಮಾಡುತ್ತಿದ್ದಾರೆ. ಇನ್ನುಳಿದಿರತಕ್ಕ ಭೂಮಿಯನ್ನು ಮುಂದಿನ 1974 ನೇ ಫಾರ್ಚ್‌ನೊಳಗೆ ಕರಾರು ಮಾಡಿಕೊಂಡು ಕೊಡಬೇಕೆಂದು ಈಗಾಗಲೇ ಆದೇಶವನ್ನು ಕೊಟ್ಟಿದೆ. ಆ ಕಾರ್ಯ ನಡೆಯುತ್ತಿದೆ.

ಶ್ರೀಮತಿ ರಾಧಾ ಕಾಂ ಭಟ್.—ಈಗ ವಿತರಣೆ ಮಾಡಿರುವ ಭೂಮಿಯಲ್ಲಿ ಖಾಸಗೀ ಜನಗಳಿಗೆ ನೀಡಿದ ಭೂಮಿ ಎಷ್ಟು ಮತ್ತು ಸಂಸ್ಥೆಗಳಿಗೆ ನೀಡಿದ ಭೂಮಿ ಎಷ್ಟು?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀಮತಿ ರಾಧಾ ಕಾಂ ಭಟ್.—ಭೂಹೀನರಿಗೆ ಕೊಡಬೇಕಾದ ಸರ್ಕಾರಿ ಜಮೀನನ್ನು ವಿತರಣೆ ಮಾಡಲು ಇನ್ನಷ್ಟು ಅವಕಾಶಬೇಕೆಂದು ಹೇಳುತ್ತಿದ್ದೀರಿ. ಈ ವಿತರಣೆಯಲ್ಲಿ ಆಗುತ್ತಿರುವ ವಿಳಂಬಕ್ಕೆ ರ್ಯಾಂಡ್ ಗ್ರಾಂಟ್ ಕಮಿಟಿಯವರು ಹೇಳುತ್ತಿರುವ ಭಿನ್ನಾಭಿಪ್ರಾಯವೇ ಕಾರಣಗಳು ಆಗಿವೆ. ಆದ್ದರಿಂದ ಆ ಸಮಿತಿಯನ್ನು ಪುನಃ ರಚಿಸಿ ಇರತಕ್ಕ ಭೂಮಿಯನ್ನು ಭೂಹೀನರಿಗೆ ವಿತರಣೆ ಮಾಡಲು ಈಗಲಾದರೂ ತಾವು ಆದೇಶವನ್ನು ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲು ಈ ಭೂಮಿಯು ಹಂಚಿಕೆ ಅಧಿಕಾರಿಗಳಿಂದ ನಡೆಯುತ್ತಿದ್ದಾಗ ನಿಧಾನವಾಗುತ್ತದೆಂದು, ಇತ್ತೀಚೆಗೆ ಈ ಸಮಿತಿಗಳನ್ನು ರಚಿಸಲಾಯಿತು. ಆದರೆ ಈ ಸಮಿತಿಗಳು ಭೂಮಿಯನ್ನು ಹಂಚಿತಕ್ಕ ವೇಳೆಯಲ್ಲಿ ಭಿನ್ನಾಭಿಪ್ರಾಯಗಳು ಬರುವುದು ಸಹಜ. ಈ ಭೂಮಿ ಹಂಚಿಕೆಯ ಕೆಲಸ ಆದಷ್ಟು ಶೀಘ್ರವಾಗಿ ಆಗುವುದಕ್ಕೆ ಏನೇನು ಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೈಗೊಂಡು ಬೇಗ ಫಿಲೇವಾರಿ ಆಗುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರು ಈಗತಾನೆ ಅಲ್ಲಿ ಮೂರು ಸಾವಿರ ಚಿಲ್ಲರೆ ಎಕರೆ ಭೂಮಿ ವಿತರಣೆಯಾಗತಕ್ಕದ್ದು ಇವೆ ಎಂದು ಹೇಳಿದರು. ಹಾಗಿರುವಾಗ ಇಲ್ಲಿ ಹಂಚಿರತಕ್ಕ ಭೂಮಿಯನ್ನು ನೋಡಿದರೆ ಬಹಳ ಕಡಮೆ ಇದೆ; ಇದಕ್ಕೆ ಕಾರಣ ಆ ಸಮಿತಿಯವರು ಕೂಡಿದ್ದೇ ಬಹಳ ಕಡಮೆಯೋ ಅಥವಾ ಅಲ್ಲಿ ಇರತಕ್ಕ ಭೂಮಿನೇ ಕಡಮೆಯೋ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ನಾನಾಗಲೇ ಹೇಳಿದಹಾಗೆ ಅಲ್ಲಿ ಇರತಕ್ಕ ಭೂಮಿ 3841 ಎಕರೆಗಳು. ಅದರಲ್ಲಿ ರೈಲ್ವೆ ಲೈನು ಬರುತ್ತದೆಂದು 723 ಎಕರೆಗಳನ್ನು ರಿಜರ್ವ್ ಮಾಡಿದೆ. ಅದರ ಜೊತೆಗೆ ಟೌನ್ ಎಕ್ಸ್‌ಟೆನ್‌ಷನ್‌ಗಾಗಿ 113 ಎಕರೆಗಳನ್ನು ರಿಜರ್ವ್ ಮಾಡಲಾಗಿದೆ. ಉಳಿದ ಭೂಮಿಯನ್ನು ವಿತರಣೆ ಮಾಡುವುದಕ್ಕೆ ಸಮಿತಿಗಳನ್ನು ರಚನೆ ಮಾಡುವುದಕ್ಕೆ ಸ್ವಲ್ಪಕಾಲ ಹಿಡಿಯಿತು. ಆದರೆ ಈ ಸಮಿತಿಗಳು ರಚನೆಯಾಗುವುದಕ್ಕೆ ಪೂರ್ವದಲ್ಲಿ ಕೇವಲ ಐದುತಿಂಗಳ ಕಾಲದಲ್ಲಿ 1114 ಎಕರೆ ಭೂಮಿಯನ್ನು ಹಂಚಲಾಗಿತ್ತು. ಈ ಸಮಿತಿ ಬಂದ ನಂತರ 6 ತಿಂಗಳ ಅವಧಿಯಲ್ಲಿ ವಿತರಣೆಯಾಗಿರತಕ್ಕ ಜಮೀನು 263 ಎಕರೆಗಳು ಮಾತ್ರ. ಆದರೆ ಸಮಿತಿಯಲ್ಲೂ ಕೂಡ ಭಿನ್ನಾಭಿಪ್ರಾಯಗಳು ಬಂದೇ ಬರುತ್ತವೆ. ಮೊದಲು ಸಮಿತಿಗಳನ್ನು ಮಾಡಿದ ತರುವಾಯದಲ್ಲಿ ಸ್ವಲ್ಪ ನಿಧಾನವಾಯಿತು. ಆದರೆ ಇತ್ತೀಚೆಗೆ ಇವು ಕ್ರಮವಾಗಿ ಕೆಲಸ ಮಾಡುತ್ತಿವೆ. ಆದರೆ ಭೂಮಿಗಾಗಿ ಬಂದು ಗ್ರಾಮದಲ್ಲಿ ಹತ್ತು ಜನರು ಅರ್ಜಿ ಹಾಕಿದ್ದರೆ ಅವರಲ್ಲಿ ಯಾರಿಗಾದರೂ ಅವರ ಸಂಸಾರದಲ್ಲಿ ಜಮೀನಿರತಕ್ಕವರಿದ್ದಾರೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಿ ಭೂಮಿಯನ್ನು ಹಂಚಲಾಗುತ್ತಿದೆ. ಆದರೆ ಇನ್ನು ಮುಂದಕ್ಕೆ ಹೀಗೆ ನಿಧಾನವಾಗುವುದಕ್ಕೆ ಅವಕಾಶವಿಲ್ಲದಂತೆ ವಿತರಣೆ ಮಾಡುವುದಕ್ಕೆ ಪ್ರಯತ್ನಗಳನ್ನು ಮಾಡಲಾಗುತ್ತದೆ.

ಶ್ರೀ ಎಂ. ಚಿಕ್. ಜಯಪ್ರಕಾಶನಾರಾಯಣ.—ಮಾನ್ಯ ಸಚಿವರು ಅಲ್ಲಿ ವಿತರಣೆಮಾಡಲು 3841 ಎಕರೆ ಭೂಮಿ ಇದೆಯೆಂದು ಹೇಳಿದ್ದರೂ ಕಾರ್ವಾರ, ಅಂಕೋಲ, ಸಿದ್ದಾಪುರ ತಾಲ್ಲೂಕುಗಳಲ್ಲಿ ಒಂದು ಎಕರೆ ಭೂಮಿಯನ್ನಾದರೂ ಹಂಚದಿರುವುದಕ್ಕೆ ಏನು ಕಾರಣ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸಿದ್ದಾಪುರದಲ್ಲಿ ವಿತರಣೆಯಾಗಿರತಕ್ಕ ಭೂಮಿ 27 ಎಕರೆ ಮತ್ತು 7 ಗುಂಟೆ; ಸಿರ್ಸಿ ತಾಲ್ಲೂಕಿನಲ್ಲಿ 243 ಎಕರೆ 11 ಗುಂಟೆ; ಕುಮಟಾದಲ್ಲಿ 131 ಎಕರೆ 31 ಗುಂಟೆ; ಅಂಕೋಲಾದಲ್ಲಿ 41 ಎಕರೆ 31 ಗುಂಟೆ; ಹೊನ್ನಾವರದಲ್ಲಿ 24 ಎಕರೆಗಳು; ಎಲ್ಲಾಪುರ ತಾಲ್ಲೂಕಿನಲ್ಲಿ 46 ಎಕರ 7 ಗುಂಟೆ; ಹಲಿಯಾಳದಲ್ಲಿ 50 ಎಕರೆ 10 ಗುಂಟೆ; ಮುಂಡಗೋಡು ತಾಲ್ಲೂಕಿನಲ್ಲಿ 236 ಎಕರೆ 1 ಗುಂಟೆ; ಸೂಪಾ ತಾಲ್ಲೂಕಿನಲ್ಲಿ 129 ಎಕರೆಗಳು; ಹೀಗೆ ಭೂಮಿಯನ್ನು ವಿತರಣೆಮಾಡಲಾಗಿದೆ. ಇನ್ನು ಮುಂದೆ ಆ ಸಮಿತಿಯವರು ತಿಂಗಳಲ್ಲಿ 2—3 ಸಾರಿ ಸೇರಿ ಇದನ್ನು ಇನ್ನೂ ಬೇಗ ಬೇಗ ತೀರ್ಮಾನ ಮಾಡುವುದಕ್ಕೆ ಪ್ರಯತ್ನಗಳನ್ನು ಮಾಡಲಾಗುತ್ತದೆ.

Lorry Accident on 22-3-1973 Between Yeshwanthanagar and Sandur

960. Sri B. SATYANARAYANASINGH (Hospet).—

Will the Chief Minister be pleased to state :—

(*a*) whether the Government is aware of the lorry accident that occurred on 22nd March 1973 between Yeshwanthanagar and Sandur killing eight persons and injuring fifteen persons ;

(*b*) whether Government is aware that incidence of such accidents in this area is on increase ; if so, the number of accidents that occurred